# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 66(64) |
| ಮಾನ್ಯ ಸದಸ್ಯರ ಹೆಸರು: | ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು: | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |
| ಉತ್ತರಿಸಬೇಕಾದ ದಿನಾಂಕ: | 09.12.2024. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪಿಟಿಆರ್ 2022ರ ನಿಯಮಾವಳಿಗಳಂತೆ ರಾಜ್ಯಾದ್ಯಂತ ಜಿಲ್ಲಾವಾರು ಸೃಜನೆಯಾಗಿರುವ ಆಂಗ್ಲ ಭಾಷಾ ಪದವೀಧರ ಪ್ರಾಥಮಿಕ ಶಿಕ್ಷಕರ (6-8) ರ ಸಂಖ್ಯೆ ಎಷ್ಟು; | ಪಿಟಿಆರ್ 2022 ನಿಯಮಾವಳಿಗಳಂತೆ ರಾಜ್ಯಾದ್ಯಂತ ಸೃಜನೆಯಾಗಿರುವ ಆಂಗ್ಲ ಭಾಷಾ ಪದವೀಧರ ಪ್ರಾಥಮಿಕ ಶಿಕ್ಷಕರ (6-8) ರ ಒಟ್ಟು ಸಂಖ್ಯೆ 1151. |
| ಆ) | 2016 ರಿಂದ 2023ರವರೆಗೆ ನಾಲ್ಕು ಬಾರಿ ಜಿಲ್ಲಾವಾರು ನೇಮಕಾತಿ ಹೊಂದಿ, ಕರ್ತವ್ಯ ನಿರ್ವಹಿಸುತ್ತಿರುವ ಆಂಗ್ಲ ಭಾಷಾ ಪದವೀಧರ ಪ್ರಾಥಮಿಕ ಶಿಕ್ಷಕರ (6-8) ರ ಒಟ್ಟು ಸಂಖ್ಯೆ ಎಷ್ಟು | 2016 ರಿಂದ 2023ರ ವರೆಗೆ ನಾಲ್ಕು ಬಾರಿ ಜಿಲ್ಲಾವಾರು ನೇಮಕಾತಿ ಹೊಂದಿ ಕರ್ತವ್ಯ ನಿರ್ವಹಿಸುತ್ತಿರುವ ಆಂಗ್ಲ ಭಾಷಾ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ (6-8) ರ ಒಟ್ಟು ಸಂಖ್ಯೆ 5818. |
| ಇ) | 2023-24ನೇ ಸಾಲಿನಲ್ಲಿ ಶಿಕ್ಷಕರ ಸಾರ್ವತ್ರಿಕ ವರ್ಗಾವಣೆಯಲ್ಲಿ ವರ್ಗಾವಣೆ ಬಯಸಿ ಅರ್ಜಿ ಸಲ್ಲಿಸಿದ ಆಂಗ್ಲ ಭಾಷಾ ಪದವೀಧರ ಪ್ರಾಥಮಿಕ ಶಿಕ್ಷಕರ (6-8) ರ ಒಟ್ಟು ಸಂಖ್ಯೆ ಎಷ್ಟು; ಅವರುಗಳಲ್ಲಿ ಸ್ಥಳ ನಿಯುಕ್ತಿಗೊಂಡ ಜಿಲ್ಲಾವಾರು ಶಿಕ್ಷಕರ ಸಂಖ್ಯೆ ಎಷ್ಟು; ವರ್ಗಾವಣೆ ಬಯಸಿದ್ದರೂ ವರ್ಗಾವಣೆ ಸಿಗದಿರಲು ಕಾರಣಗಳೇನು; | • 2023-24ನೇ ಸಾಲಿನಲ್ಲಿ ಶಿಕ್ಷಕರ ಸಾರ್ವತ್ರಿಕ ವರ್ಗಾವಣೆಯಲ್ಲಿ ವರ್ಗಾವಣೆ ಬಯಸಿ ಅರ್ಜಿ ಸಲ್ಲಿಸಿದ ಆಂಗ್ಲ ಭಾಷಾ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ (6-8) ರ ಒಟ್ಟು ಸಂಖ್ಯೆ -2296.<br>• ವರ್ಗಾವಣೆ ಪಡೆದು ಸ್ಥಳ ನಿಯುಕ್ತಿಗೊಂಡ ಶಿಕ್ಷಕರ ಸಂಖ್ಯೆ ಒಟ್ಟು-108<br>• 25% ಕ್ಕಿಂತ ಹೆಚ್ಚಿನ ಹುದ್ದೆಗಳು ಖಾಲಿಯಿರುವ ತಾಲ್ಲೂಕಿನಿಂದ ಶಿಕ್ಷಕರು ಬೇರೆಡೆಗೆ ವರ್ಗಾವಣೆ ಪಡೆಯಲು ಅವಕಾಶವಿರುವುದಿಲ್ಲ. ವರ್ಗಾವಣೆಗೆ ಅರ್ಜಿ ಸಲ್ಲಿಸಿ ಅರ್ಹತೆ ಇರುವ ಶಿಕ್ಷಕರು ಮಾತ್ರ ವರ್ಗಾವಣೆ ಪಡೆದಿರುತ್ತಾರೆ. |
| ಈ) | ಆಂಗ್ಲ ಭಾಷಾ ಪದವೀಧರ ಪ್ರಾಥಮಿಕ ಶಿಕ್ಷಕರ (6-8) ರ ವರ್ಗಾವಣೆ ಸಮಸ್ಯೆಗಳು ಸರ್ಕಾರದ ಗಮನಕ್ಕೆ ಬಂದಿವೆಯೇ; ಬಂದಿದ್ದಲ್ಲಿ. ಸದರಿ ವರ್ಗಾವಣೆ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಇದುವರೆಗೆ ತೆಗೆದುಕೊಂಡಿರುವ ಕ್ರಮಗಳೇನು? | ಹೌದು<br>ಜಿ.ಪಿ.ಟಿ (ಆಂಗ್ಲ) ಭಾಷಾ ಶಿಕ್ಷಕರಿಗೆ ಜಿ.ಪಿ.ಟಿ (ಕನ್ನಡ) ಜಿ.ಪಿ.ಟಿ (ಜೀವ ವಿಜ್ಞಾನ) -ಜಿ.ಪಿ.ಟಿ (ಹಿಂದಿ) ಹುದ್ದೆಗಳನ್ನು ವರ್ಗಾವಣೆಯಲ್ಲಿ ಆಯ್ಕೆ ಮಾಡಿಕೊಳ್ಳಲು ಅವಕಾಶ ಮಾಡಿಕೊಡಬೇಕೆಂಬ ಶಿಕ್ಷಕರ ಮನವಿ ಇರುತ್ತದೆ. ಆದರೆ ಜಿ.ಪಿ.ಟಿ ಆಂಗ್ಲ ಭಾಷಾ ಶಿಕ್ಷಕರಿಗೆ ಇತರೆ ಬೇರೆ ವಿಷಯದ ಹುದ್ದೆಯನ್ನು ವರ್ಗಾವಣಾ ಕೌನ್ಸಿಲಿಂಗ್‌ನಲ್ಲಿ ಆಯ್ಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. |

**ಇಪಿ 82 ಪಿಎಂಎ 2024**

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು